	ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ:-	
10	1. ಮೀನುಗಾರಿಕೆ ಇಲಾಖೆ	51
	2. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ	112
	ಅರಣ್ಯ ಪರಿಸರ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ	
11.	ಇಲಾಖೆ	
	ಅರಣ್ಯ ಇಲಾಖೆ	5690
	ಕೃಷಿ ಮತ್ತು ತೋಟಗಾರಿಕೆ ಇಲಾಖೆ :-	
12	1) ತೋಟಗಾರಿಕೆ ಇಲಾಖೆ	866
	2) ಕೃಷಿ ಇಲಾಖೆ	58
	ಕಂದಾಯ ಇಲಾಖೆ	
13	1) ಕಂದಾಯ ಇಲಾಖೆ	34
	ಸಹಕಾರ ಇಲಾಖೆ	
14	1) ಕೃಷಿ ಮಾರಾಟ ಇಲಾಖೆ	61
	ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ	
15	ವ್ಯವಹಾರಗಳ ಇಲಾಖೆ:-	
	1) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ	6
	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :-	
16	1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	1
	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	
17	ಇಲಾಖೆ	4,109
	ಒಟ್ಟು	17,070

ಶ್ರೀ ಜಗದೀಶ್ ಶೆಟ್ಟರ್ :- ಇದು ಬಹಳ ಮಹತ್ವದ ವಿಷಯ. ದಿನಗೂಲಿ ನೌಕರದಾರರ ಬಗ್ಗೆ ಈ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಲವಾರು ವಿವರಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ 1.7.84ರ ಮುಂಚೆ ಏನು ದಿನಗೂಲಿಗಳಾಗಿ ಕೆಲಸ ಮಾಡುತ್ತಾ ಇದ್ದರು, ಹೆಚ್ಚುಕಡಿಮೆ ಆ ನೌಕರುಗಾರರೆಲ್ಲಾ ಸುಪ್ರೀಂ ಕೋರ್ಟಿನ ಐತಿಹಾಸಿಕ ತೀರ್ಪಿನ ಪ್ರಕಾರ ಈಗಾಗಲೇ ನೇಮಕವಾಗಿದ್ದಾರೆ. ಆದರೆ, 1.7.84ರ ನಂತರ, ನೀವು ಕೊಟ್ಟಿರುವ ಪಟ್ಟಿಯ ಪ್ರಕಾರವೇ 17 ಸಾವಿರದಷ್ಟು ದಿನಗೂಲಿನೌಕರದಾರರು ಇದ್ದು, ಇವತ್ತಿಗೂ ಅವರಿಗೆ ಖಾಯಂ ಆಗಿಲ್ಲ. ಇವತ್ತಿಗೂ ಅವರು ಸೇವಾ ಅಭದ್ರತೆಯಿಂದ ನರಳುತ್ತಾ ಇದ್ದಾರೆ. ಏಕೆಂದರೆ, ಕನಿಷ್ಟ ಹತ್ತು ವರ್ಷ ಸೇವೆ ಮಾಡಿದ್ದಾರೆ. 15 ರಿಂದ 18 ವರ್ಷ ಸೇವೆ ಮಾಡಿದವರೂ ಇದ್ದಾರೆ. ಇವರನ್ನು ಖಾಯಂ ನೇಮಕಾತಿ ಮಾಡುವಂಥಾದ್ದು ಬಹಳ ಅವಶ್ಯಕತೆ ಇದೆ. ಇವತ್ತು ಅವರ ಕಡೆಯಿಂದ ಎಲ್ಲಾ ಕೆಲಸವನ್ನೂ ಮಾಡಿಸಿಕೊಳ್ಳುತ್ತಿದ್ದೇವೆ. ಆದರೆ, ಅವರಿಗೆ ಸೇವಾ ಭದ್ರತೆ ಇಲ್ಲ. ಎಷ್ಟೋ ಜನ ನಿವೃತ್ತಿಯಾಗುವಂಥ ಹಂತಕ್ಕೆ ಬಂದಿದ್ದಾರೆ. ಎಷ್ಟೋ ಜನ ಮೃತಪಟ್ಟಿದ್ದಾರೆ. ಅವರ ಕುಟುಂಬಕ್ಕೆ ಸೇವಾ ಭದ್ರತೆ ಇಲ್ಲ. ಇತರೆ ನೌಕರರಿಗೆ ಸಿಗುವಂಥ ಮೂಲಭೂತವಾದಂಥ ಸೌಕರ್ಯಗಳು ಇವರಿಗೆ ಇಲ್ಲ. ಸಂಬಳವೂ ಸಹಿತ ಸರಿಯಾದ ಸಮಯಕ್ಕೆ ಸಿಕ್ಕುತ್ತಾ ಇಲ್ಲ.

ಹೀಗಾಗಿ ಈ ಅಭದ್ರತೆಯಿಂದ ಅವರು ಸರಳುತ್ತಿದ್ದಾರೆ. ಅವರಿಗೆ ಯಾವುದೇ ಒಂದು ಸೇವಾ ಭದ್ರತೆ ಇಲ್ಲದಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. 1.7.84ರ ಮುಂಚೆ ನೀವು ಯಾವರೀತಿ ನೇಮಕಾತಿ ಮಾಡಿದ್ದೀರಿ. ಅದೇರೀತಿ ನೇಮಕಾತಿ ಮಾಡಿ, ಖಾಯಂ ಮಾಡುವಂಥಾದ್ದು ದಯವಿಟ್ಟು ಆಗಬೇಕು. ಇನ್ನೂವರೆಗೆ ಇದು ಏಕೆ ಆಗಲಿಲ್ಲ? ಈಗಾಗಲೇ ನೀವು ಡಿಪ್ಲೊಮಾ ಹೋಲ್ಡರ್ಸ್‌ನ್ನು, ಇಂಜಿನಿಯರುಗಳನ್ನು 1.7.84 ರಿಂದ ಯಾರು ದಿನಗೂಲಿಯಾಗಿ ಸೇವೆ ಮಾಡಿದ್ದಾರೆ, ಅವರ ನೇಮಕಾತಿಯನ್ನು ನೀವು ಖಾಯಂ ಮಾಡಿದ್ದೀರಿ. ಆದರೆ, ಉಳಿದಂಥವರು, ಅದರಲ್ಲಿ "ಡಿ" ಗುಂಪಿನವರು ಬಹಳಷ್ಟು ಇದ್ದಾರೆ. ದಲಿತ ಜನಾಂಗಕ್ಕೆ ಸಂಬಂಧಪಟ್ಟವರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಈ 17 ಸಾವಿರ ಜನರಲ್ಲಿ 75-80 ಪರ್ಸೆಂಟ್ ಅವರೇ ಇದ್ದಾರೆ. ಹೀಗಾಗಿ, ಇವರನ್ನು ಖಾಯಂ ನೇಮಕಾತಿ ಮಾಡುವಂಥಾದ್ದು ಬಹಳ ಅವಶ್ಯ ಇದೆ. ಇಲ್ಲಿಯವರೆಗೆ ಏಕೆ ಮಾಡಲಿಲ್ಲವೆಂಬ ಬಗ್ಗೆ ದಯವಿಟ್ಟು ಮುಖ್ಯಮಂತ್ರಿಗಳು ವಿವರಣೆ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :- ದಿನಗೂಲಿ ನೌಕರರನ್ನು ಖಾಯಂ ಮಾಡತಕ್ಕಂಥ ವಿಚಾರ ಸುಪ್ರೀಂ ಕೋರ್ಟ್ ಮುಂದೆ ಹಲವಾರು ಪಿಟಿಷನ್ಸ್ ಮೂಲಕ ವಿಚಾರಣೆಗೆ ಬಂದಿತ್ತು. ಸುಪ್ರೀಂ ಕೋರ್ಟಿನವರು ಒಂದು ತೀರ್ಮಾನವನ್ನು ಮಾಡಿ, ಆ ತೀರ್ಮಾನದ ಪ್ರಕಾರ ಒಂದು ಕಟ್ ಆಫ್ ಡೇಟನ್ನು ನಿರ್ಧಾರ ಮಾಡಿದರು. ಸುಪ್ರೀಂ ಕೋರ್ಟಿನ ಆ ನಿರ್ದೇಶನದ ಪ್ರಕಾರ, ಆ ಕಟ್ ಆಫ್ ಡೇಟಿನ ಒಳಗಡೆ ಇದ್ದಂಥ ಎಲ್ಲಾ ದಿನಗೂಲಿ ನೌಕರರನ್ನು ನಾವು ಖಾಯಂ ಮಾಡಿದ್ದೇವೆ. 1.7.84ರ ನಂತರ ನೇಮಕಾತಿ ಹೊಂದಿರುವ ಸುಮಾರು ಹದಿನೇಳು ಸಾವಿರ ದಿನಗೂಲಿ ನೌಕರರನ್ನು ನಾವು ಖಾಯಂ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಇದು ಮತ್ತೊಮ್ಮೆ ಸುಪ್ರೀಂ ಕೋರ್ಟಿನ ಮೆಟ್ಟಿಲನ್ನು ತಲುಪಿದೆ. ಒಂದು ಎಸ್‌ಎಲ್‌ಪಿ ಸುಪ್ರೀಂ ಕೋರ್ಟ್‌ನಲ್ಲಿ ಈಗ ಹಾಲಿ ಇದೆ. ಅದರ ಬಗ್ಗೆ ಸುಪ್ರೀಂಕೋರ್ಟ್‌ನವರು ಏನು ತೀರ್ಮಾನ ಮಾಡುತ್ತಾರೋ ಅದರ ನಿರೀಕ್ಷಣೆಯಲ್ಲಿ ನಾವಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗಿದೆ ಅಂದರೆ, 01.07.084ರ ನಂತರ ಹೈಕೋರ್ಟ್‌ನಲ್ಲಿ ಒಂದು ಕೇಸ್‌ನ್ನು ದಿನಗೂಲಿ ನೌಕರರ ಸಂಘದವರು ಮಾಡಿದರು. ತೀರ್ಪು ಕೂಡ ಅವರಂತೆ ಆಯಿತು. 1.7.84ರ ನಂತರ ಹತ್ತು ವರ್ಷಗಳಿಗಿಂತ ಹೆಚ್ಚು ಸೇವೆಯನ್ನು ಮಾಡಿದ್ದಾರೋ ಅವರನ್ನೂ ಖಾಯಂ ಮಾಡಬೇಕೆಂದು ತೀರ್ಪು ಆಯಿತು. ಆ ತೀರ್ಪಿನ ವಿರುದ್ಧ ರಿಟ್ ಅಪೀಲ್ ಆಯಿತು. ರಿಟ್ ಅಪೀಲ್‌ನಲ್ಲಿ ಸರಕಾರದ ಪರವಾಗಿ ತೀರ್ಪು ಆಯಿತು. ಆ ತೀರ್ಪಿನ ವಿರುದ್ಧ ಹಾಕಿದ ಎಸ್‌ಪಿಎಲ್ ಈಗ ಸಿವಿಲ್ ಅಪ್ಲಿಕೇಶನ್ ಎಂದು ಆಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಅದು ಪೆಂಡಿಂಗ್‌ನಲ್ಲಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದೇ ಸಮಯದಲ್ಲಿ ಏನಾಗಿದೆಯೆಂದರೆ, ಯಾರು ಹೈಕೋರ್ಟ್‌ಗೆ ಹೋಗಿ ಇಂಡೊವಿಜಿಯಲ್ ಆಗಿ ರಿಟ್ ಫೈಲ್ ಮಾಡಿದ್ದಾರೆ, ಅವರುಗಳನ್ನು ನೀವು ನೇಮಕಾತಿ ಮಾಡಿದ್ದೀರಿ. ಅವರ ಸಂಖ್ಯೆ 400 ರಿಂದ 1000 ತನಕವೂ ಇರಬಹುದು. ಹಾಗಾದರೆ ಉಳಿದವರು ಏನು ಮಾಡಬೇಕು? ಎಲ್ಲರೂ ಕೋರ್ಟ್‌ಗೆ ಹೋಗಬೇಕೋ?ಹೇಗೆ? ಸುಪ್ರೀಂಕೋರ್ಟ್‌ನಲ್ಲಿ ಸಿವಿಲ್ ಅಪೀಲ್ ಆಡ್ಮಿಟ್ ಆಗಿದೆ. ಅದೇ ಹೊತ್ತಿನಲ್ಲಿ ಹೈಕೋರ್ಟ್‌ನವರ ಡೈರೆಕ್ಷನ್ ಅನ್ವಯ ಅವರಿಗೆ

ನೇಮಕಾತಿಯನ್ನು ಕೊಟ್ಟಿದ್ದೀರಿ. ಹಾಗೆ ಮಾಡಿದ್ದು ನಾನು ತಪ್ಪು ಎಂದು ಹೇಳುವುದಿಲ್ಲ. ಆದರೆ ಎಲ್ಲರಿಗೂ ಒಂದು ಪಾಲಿಸಿ ಡಿಸಿಶನ್ ತೆಗೆದುಕೊಂಡು ಬಿಡಿ. ಏಕೆಂದರೆ ಅವರಿಗೆ ಸೇವಾ ಅಭದ್ರತೆ ಇದೆ. ಸುಮಾರು 17 ಸಾವಿರ ಜನರ ಭವಿಷ್ಯವು ಇದರಲ್ಲಿದೆ. ಅವರು ಇವೊತ್ತು ಜನತೆಯ, ಸರಕಾರದ ಸೇವೆಯನ್ನು ಮಾಡುತ್ತಾ ಇದ್ದಾರೆ. ಅವರನ್ನು ಖಾಲಿ ಕೂರಿಸಿ ಪಗಾರವನ್ನು ನೀವು ಕೊಡುತ್ತಾ ಇಲ್ಲ. ಅವರ ಕಡೆಯಿಂದ ನೀವು ದುಡಿಸಿಕೊಳ್ಳುತ್ತಾ ಇದ್ದೀರಿ. ಹೀಗಿರುವಾಗ ಅವರನ್ನು ನೇಮಕಾತಿ ಮಾಡಿ ಅವರಿಗೆ ಸೇವಾ ಭದ್ರತೆ ಕೊಡುವುದರಲ್ಲಿ ಏನು ತಪ್ಪಿದೆ? ಹಿಂದೆ ನಾನು ಸದನದಲ್ಲಿ ಇದೇ ಪ್ರಶ್ನೆಯನ್ನು ಕೇಳಿದಂಥ ಸಂದರ್ಭದಲ್ಲಿ ಮಾನ್ಯ ಚಂದ್ರೇಗೌಡರು ಉತ್ತರವನ್ನು ಕೊಟ್ಟಿದ್ದರು. ಇವೊತ್ತು ಕೂಡ ತಮ್ಮ ಉತ್ತರದಲ್ಲಿದೆ. ಹಾಗೆಯೇ ಸರಕಾರದ ಅಧಿಕಾರಿಗಳಿಂದ ಬಂದ ಒಂದು ಉತ್ತರದಲ್ಲಿಯೂ ಒಂದು ವಿಚಾರವಿದೆ. ಹಿಂದಿನ ಸದನದಲ್ಲಿ ನಿಯಮ-351ರಲ್ಲಿ ಕೇಳಿದಾಗ ತಾವುಗಳು ಹೇಳಿದ್ದೀರಿ. ಸುಪ್ರೀಂಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್ ಇದೆ. "ದಿನಾಂಕ: 1.7.84ರ ನಂತರ ಸರಕಾರದ ವಿವಿಧ ಇಲಾಖೆಗಳಲ್ಲಿ ತೊಡಗಿಸಲಾದ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಬೇಕೆಂಬ ಬೇಡಿಕೆಯನ್ನು ಹಾಗೂ ಕೆಲವೇ ಇತರ ವಿಷಯಗಳನ್ನು ಪರಿಶೀಲಿಸಲು ಸಚಿವ ಸಂಪುಟದ ಉಪ-ಸಮಿತಿಯನ್ನು ರಚಿಸಲಾಗಿದೆ ಎಂಬ ಮಾತನ್ನು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇವೊತ್ತಿನ ಉತ್ತರದಲ್ಲಿ ಕೂಡ ಅದನ್ನು ತಾವುಗಳು ಹೇಳಿದ್ದೀರಿ. ಹೀಗಾಗಿ ಇವೊತ್ತು ಸರಕಾರದ ಮನಸ್ಸಿನಲ್ಲಿ ಇದೆ. ಇವರುಗಳನ್ನು ಖಾಯಂಗೊಳಿಸಬೇಕೆಂಬ ಆಲೋಚನೆಯು ತಮ್ಮಲ್ಲಿದೆ. ಸುಪ್ರೀಂಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್ ಇರುವುದನ್ನೂ ಹೇಳುತ್ತೀರಿ, ಸಚಿವ ಸಂಪುಟದ ಉಪಸಮಿತಿಯನ್ನು ತಾವು ಮಾಡಿರುವುದನ್ನೂ ಹೇಳುತ್ತೀರಿ. ಈ ರೀತಿಯಾದ ಆಲೋಚನೆಯು ತಮ್ಮ ಮನಸ್ಸಿನಲ್ಲಿ ಇದ್ದಾಗ, ಸಚಿವ ಸಂಪುಟದ ಉಪಸಮಿತಿಯು ಯಾವೊತ್ತಾದರೂ ಸೇರಿದೆಯೋ ಹೇಗೆ? ನೀವು ನಿರ್ಧಾರವನ್ನು ಯಾವಾಗ ಕೈಗೊಳ್ಳುತ್ತೀರಿ? ಸುಪ್ರೀಂಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್‌ನಲ್ಲಿ ಇರಲಿ. ಕೇಸ್ ಪೆಂಡಿಂಗ್‌ನಲ್ಲಿರುವುದಕ್ಕೂ ನೀವು ನಿರ್ಣಯ ತೆಗೆದುಕೊಳ್ಳುವುದಕ್ಕೂ ಯಾವುದೇ ತೊಂದರೆಯಿಲ್ಲ. ಸಬ್‌ಜ್ಯುಡೀಸ್ ಮುಂತಾಗಿ ಯಾವ ಪ್ರಶ್ನೆಯೂ ಬರುವುದಿಲ್ಲ. ನೀವು ಒಂದು ಪಾಲಿಸಿ ಡಿಸಿಶನ್ ತೆಗೆದುಕೊಂಡು 17 ಸಾವಿರ ಜನರನ್ನು ದಿನಗೂಲಿ ನೌಕರರನ್ನು ಖಾಯಂ ಮಾಡುತ್ತೇವೆ ಅಂದರೆ, ಸುಪ್ರೀಂಕೋರ್ಟ್‌ನ ಕೇಸ್‌ನ್ನು ಅವರು ವಿಥ್‌ಡ್ರಾ ಮಾಡಿಕೊಳ್ಳುತ್ತಾರೆ. ಅಲ್ಲಿ ಯಾವ ಸಮಸ್ಯೆಯೂ ಆಗುವುದಿಲ್ಲ. ಹಾಗಾಗಿ ದಿನಗೂಲಿ ನೌಕರರ ಭವಿಷ್ಯವು ಸರಕಾರದ ಕೈಯಲ್ಲಿದೆ, ಅವರು ಇವೊತ್ತಿಗೂ ಸೇವೆಯನ್ನು ಮಾಡುತ್ತಾ ಇದ್ದಾರೆ, ಅವರ ಸೇವೆಯು ಅಗತ್ಯವಿದೆ, ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಇದಕ್ಕೊಂದು ಪಾಲಿಸಿ ಡಿಸಿಶನ್ ತೆಗೆದುಕೊಂಡು ಎಲ್ಲಾ 17 ಸಾವಿರ ದಿನಗೂಲಿ ನೌಕರರನ್ನು ಖಾಯಂ ಮಾಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ :- ಮಾನ್ಯ ಅಧ್ಯಕ್ಷರೇ, ಆ 17 ಸಾವಿರ, ದಿನಗೂಲಿ ನೌಕರರೇ ನಿದ್ದಾರೆ, ಅವರಲ್ಲಿ ಸುಮಾರು 150 ಜನ ಪ್ರತ್ಯೇಕವಾಗಿ ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸಿ, ನ್ಯಾಯಾಲಯಗಳಿಂದ ಅವರು ಡೈರೆಕ್ಷನ್ಸ್‌ನ್ನು ಪಡೆದುಕೊಂಡು ಬಂದಿದ್ದಾರೆ. ಒಟ್ಟಾರೆ ಈ ಎಲ್ಲಾ ವಿಚಾರಗಳೇ ಸುಪ್ರೀಂ ಕೋರ್ಟ್‌ನ ಸಿವಿಲ್ ಅಪೀಲ್ ಎಂದು ತಾವೇನು ಹೇಳಿದ್ದೀರಿ, ಆ ಸಿವಿಲ್ ಅಪೀಲ್‌ನಲ್ಲಿ ದಾಖಲಾಗಿದೆ. ಕ್ಯಾಬಿನೆಟ್ ಸಬ್‌ಕಮಿಟಿ 2000ನೇ ಇಸವಿಯಲ್ಲಿ